


# ಸಾಧಿಸುವ ಛಲವಿದ್ದರೆ, ಮನೆಯಲ್ಲಿದ್ದರೇನಂತೆ?

ಒಮ್ಮೊಮ್ಮೆ ಹೀಗಾಗುವುದುಂಟು. ಎಷ್ಟೋ ಜನ ಮಹಿಳೆಯರು ಓದಿನಲ್ಲಿ ಸಾಕಷ್ಟು ಮುಂದಿದ್ದು ಉತ್ತಮ ಕಾಲೇಜುಗಳಲ್ಲಿ ಪ್ರವೇಶ ಗಿಟ್ಟಿಸಿಕೊಂಡು ಕಷ್ಟಪಟ್ಟು ಓದಿ ಉತ್ತಮ ಅಂಕ ಪಡೆದು ಬಳಿಕ ಉದ್ಯೋಗಕ್ಕೆ ಸೇರಿ ಅಲ್ಲಿ ಒಳ್ಳೆ ಹೆಸರು ಹಣ ಸಂಪಾದಿಸಿ ಯಾವುದೋ ಅನಿವಾರ್ಯ ಕಾರಣಕ್ಕೆ ಅಥವಾ ಒತ್ತಡಕ್ಕೆ ಸಿಲುಕಿ ಉದ್ಯೋಗ ಬಿಟ್ಟು ಮನೆಯಲ್ಲೇ ಉಳಿಯ ಬೇಕಾಗುವ ಸಂದರ್ಭ ಬರುತ್ತದೆ.

ಮದುವೆ, ತಾಯ್ತನ, ಆತ್ಮೀಯರ ಅನಾರೋಗ್ಯ ಅಥವಾ ಇನ್ನಿತರ ಒತ್ತಡಗಳಿಂದಾಗಿ ಉದ್ಯೋಗ ಬಿಡಬೇಕಾಗಿ ಬರುವುದು. ಈ ರೀತಿ ಉದ್ಯೋಗ ಬಿಡುವ ಮಹಿಳೆಯರು ನಮ್ಮ ನಡುವೆ ಸಾಕಷ್ಟು ಸಂಖ್ಯೆಯಲ್ಲಿ ಇದ್ದಾರೆ. ಅವರಲ್ಲಿ ಬೇಜಾರು ಕಳೆಯಲು ಕ್ಲಬ್, ಪಾರ್ಟಿ, ಶಾಪಿಂಗ್ ಎಂದು ಸುತ್ತಾಡಿ ಸಮಯ ಕಳೆಯುವವರೇ ಹಲವರಾದರೂ ಮನೆಯಲ್ಲಿ ಉಳಿಯುವಂತಾದರೂ ತಾನೂ ಏನಾದರೂ ಸಾಧಿಸುತ್ತೇನೆ ಎಂದು ಹಟ ಕಟ್ಟಿ ಸಾಧಿಸುವ ಮಹಿಳೆಯರ ಸಂಖ್ಯೆ ಕಡಿಮೆಯೇನಿಲ್ಲ.

ಕಷ್ಟಪಟ್ಟು ತನ್ನ ಕನಸಿನ ಉದ್ಯೋಗ ಗಿಟ್ಟಿಸಿಕೊಂಡು ಯಶಸ್ಸು ಸಾಧಿಸುವ ಅವಕಾಶಗಳು ಸಾಕಷ್ಟಿದ್ದರೂ ಉದ್ಯೋಗ ಬಿಟ್ಟು ಒಮ್ಮೆ ಹಿನ್ನಡೆ ಅನುಭವಿಸಿದರೂ ಮುಂದೆ ತಾವೇ ಕಂಡುಕೊಂಡ ಸಾಧನೆಯ ದಾರಿಯಲ್ಲಿ ಮುನ್ನಡೆದು ಯಶಸ್ಸಿನ ಮೆಟ್ಟಿಲೇರಿದ ಮಹಿಳೆಯರು ನಮ್ಮ ನಡುವೆ ಇದ್ದಾರೆ. ಎಂತಹ ಪ್ರತಿಕೂಲ ಸಂದರ್ಭದಲ್ಲೂ ಧೃತಿಗೆಡದೆ ಲಭ್ಯ ಪರಿಸ್ಥಿತಿಯಲ್ಲಿ ಮನೆಯಲ್ಲೇ ಸಾಧ್ಯವಾದಷ್ಟು ಮಟ್ಟಿಗೆ ಸಣ್ಣ ಉದ್ಯಮವನ್ನೋ ಹವ್ಯಾಸವನ್ನೋ ಹುಡುಕಿಕೊಳ್ಳುತ್ತಾರೆ. ಇನ್ನು ಕೆಲವರು ಮಕ್ಕಳು ದೊಡ್ಡವರಾದ ಮೇಲೆ ಉಂಟಾಗುವ ಖಾಲಿತನವನ್ನು ತುಂಬಲು ಯಾವುದಾದರೂ ಕೆಲಸಕಾರ್ಯಗಳಲ್ಲಿ ತೊಡಗಿಕೊಳ್ಳುತ್ತಾರೆ. ಇನ್ನು ಉದ್ಯೋಗ ಉದ್ಯಮ ಅಲ್ಲದೇ ಹೋದರೂ ಯಾವುದಾದರೂ ಸಂಘಸಂಸ್ಥೆ ಅಥವಾ ಎನ್‌ಜಿಓಗಳಲ್ಲಿ ಸೇರಿಕೊಂಡು ಸಮಾಜಸೇವೆಯನ್ನು ನಡೆಸುವರೂ ಆ ಮೂಲಕ ಗುರುತಿಸಿಕೊಳ್ಳುವವರೂ ಇದ್ದಾರೆ.

ಈ ರೀತಿ ಯೋಚಿಸುವ ಮಹಿಳೆಯರ ಮೊದಲ ಆಯ್ಕೆ ತಮ್ಮ ಮನಸ್ಸಿಗೆ ಹಿತವೆನ್ನಿಸುವ ಕೆಲಸ ಅಥವಾ ಉದ್ಯೋಗ. ತಾವು ಹವ್ಯಾಸವಾಗಿ ರೂಢಿಸಿಕೊಂಡಿದ್ದನ್ನೇ ಮುಂದುವರಿಸುವವರೇ ಹೆಚ್ಚು. ಬರವಣಿಗೆಯ ತುಡಿತ ಇರುವವರು ಆ ಕಡೆಗೆ ವಾಲುತ್ತಾರೆ. ಭಾಷೆಯ ಮೇಲೆ ಹಿಡಿತವಿದ್ದವರು ಬರವಣಿಗೆ ಮಾತ್ರವಲ್ಲದೆ ಅನುವಾದ, ಪ್ರಾಜೆಕ್ಟ್‌ಗಳ ತಿದ್ದುಪಡಿ, ಎಂಫಿಲ್, ಪಿಎಚ್.ಡಿ ಪ್ರಬಂಧಗಳ ಭಾಷೆ ಮತ್ತು ವ್ಯಾಕರಣ ತಿದ್ದುವಿಕೆ ಮುಂತಾದ ಚಟುವಟಿಕೆಗಳಲ್ಲಿ ತೊಡಗಿಕೊಂಡವರಿದ್ದಾರೆ. ಬಹುಭಾಷಾ ಪರಿಣತಿಯಿದ್ದರೂ ಬಹುರಾಷ್ಟ್ರೀಯ ಕಂಪೆನಿಗಳಿಗೆ ಅನುವಾದಕರಾಗಿ ಸೇವೆ ಸಲ್ಲಿಸುತ್ತಾರೆ. ಮನೆಯಿಂದಲೇ ಈ ಕೆಲಸ. ಇನ್ನು ಕಂಪ್ಯೂಟರ್ ಇಂಟರ್‌ನೆಟ್‌ನಲ್ಲಿ ಪರಿಣತಿ ಇರುವ ಮಹಿಳೆಯರು ತಮ್ಮದೇ ಸ್ವಂತ ಬ್ಲಾಗ್, ವೆಬ್‌ಸೈಟ್, ಪೋರ್ಟಲ್‌ಗಳನ್ನು ಮಾಡಿಕೊಂಡು ತಮ್ಮ ಆತ್ಮತೃಪ್ತಿಗೆ ಅಲ್ಲಿ ಲೇಖನಗಳನ್ನು, ವಿಧವಿಧದ ಅಡುಗೆ ತಯಾರಿ ವಿಧಾನಗಳನ್ನು, ಕಸೂತಿ, ಕಲೆ ಮುಂತಾದ ಚಟುವಟಿಕೆಗಳ ಕುರಿತಾಗಿ ಬರೆದು ಅಪ್‌ಲೋಡ್ ಮಾಡಿಕೊಂಡು ಅಲ್ಪ ಸ್ವಲ್ಪ ಆನ್‌ಲೈನ್ ಜಾಹೀರಾತು ಗಳಿಸಿಕೊಂಡು ಖುಷಿಪಡುತ್ತಾರೆ.

ಸಂಗೀತ ನೃತ್ಯ ಅಭ್ಯಾಸ ಮಾಡುವುದು ಇನ್ನೊಂದು ಇಷ್ಟದ ಕೆಲಸ. ತನ್ನ ಬಾಲ್ಯದ ಕಲಿಕೆಯ ಹಂತದಲ್ಲಿ ಅಥವಾ ಉದ್ಯೋಗಕ್ಕೆ ಸೇರಿದ ಸಂದರ್ಭದಲ್ಲಿ ಎಲ್ಲೋ ಬಿಟ್ಟ ಸಂಗೀತಾಭ್ಯಾಸವನ್ನೋ ನೃತ್ಯಾಭ್ಯಾಸವನ್ನೋ ಮತ್ತೆ ಹಿಡಿದುಕೊಂಡು ಅದರ ಅಭ್ಯಾಸದಲ್ಲಿ ತೊಡಗಿ ಸಾಧಿಸಿದ ಹಿರಿಯ ಮಹಿಳೆಯರು ನಮ್ಮ ನಡುವೆ ಇದ್ದಾರೆ. ಅಲ್ಲದೆ ಈ ವಿದ್ಯೆಯನ್ನು ಇತರರಿಗೆ ಹಂಚುವ ಉದ್ದೇಶದಿಂದ ಸಂಗೀತ ಅಥವಾ ನೃತ್ಯ ತರಗತಿಗಳನ್ನು ಸಣ್ಣ ಮಟ್ಟಿನಲ್ಲಿ ಆರಂಭಿಸಿ ಮುಂದೆ ಸಂಸ್ಥೆಯನ್ನೇ ಕಟ್ಟಿದ ಗಟ್ಟಿಗಿತ್ತಿಯರು ಸಾಕಷ್ಟು ಸಂಖ್ಯೆಯಲ್ಲಿ ಕಾಣಸಿಗುತ್ತಾರೆ. ಹವ್ಯಾಸಿ ನಾಟಕ ರಂಗಭೂಮಿ ತಂಡಗಳಲ್ಲಿ ಸೇರಿಕೊಂಡು ನಟನೆಯಲ್ಲಿ ತೊಡಗಿಕೊಂಡು ಖುಷಿ ಕಾಣುವವರೂ ಇದ್ದಾರೆ.

ಇನ್ನು ಅನೇಕರು ತಮ್ಮ ಜವಾಬ್ದಾರಿಯೆಲ್ಲ ಮುಗಿದ ಮೇಲೆ ಅರ್ಧಕ್ಕೆ ಬಿಟ್ಟ ಕಲಿಕೆಯನ್ನು ಮುಂದುವರಿಸುವವರೂ ಇದ್ದಾರೆ. ಉಡುಪಿಯಲ್ಲಂತೂ ಹೋರಾಟ ಮಾಡಿ ಸ್ತ್ರೀಯರಿಗೆ ಈ ವರೆಗೆ ಪ್ರವೇಶವೇ ದೊರಕದ ಸಂಸ್ಕೃತ ಕಾಲೇಜಿನಲ್ಲಿ ಪ್ರವೇಶ ಗಿಟ್ಟಿಸಿಕೊಂಡು ವಿದ್ವತ್ ಪದವಿ ಗಳಿಸಿದ